**<u>2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು  ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,</u>**

**<u>ರಾಣೇಬೆನ್ನೂರು.</u>**

**<u>C.C No.1223/2019</u>**

ಸಾಕ್ಷಿದಾರರ ಹೆಸರು : ವೀರುಪಾಕ್ಷಪ್ಪ.ಸಿ.ಹೆಚ್ ***D.W- 1***

ತಂದೆಯ ಹೆಸರು : ಹನುಮಂತಪ್ಪ

ವಯಸ್ಸು : 55 ವರ್ಷ

ಉದ್ಯೋಗ : ವ್ಯವಸಾಯ

ವಾಸ : ಕೆಂಚಾಪುರ, ತಾಃಹರಪನಹಳ್ಳಿ

ಜಿಃವಿಜಯನಗರ.

**<u>ದಿನಾಂಕಃ 26-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದಃ</u>**

ದೂರದಾರರು ನಮ್ಮ ಊರಿಗೆ ಬಂದು ಜಮೀನಿನ ಮಾಲೀಕರಿಗೆ ಮೆಣಸಿನಕಾಯಿನ ಬೀಜವನ್ನು ಸರಬರಾಜು ಮಾಡುತ್ತಿದ್ದರು. ನಾವು ಬೆಳೆದು ಬೀಜವನ್ನು ಅವರಿಗೆ ಮಾರಾಟ ಮಾಡುತ್ತಿದ್ದೇವು. ಆ ಮೂಲಕ ದೂರುದಾರರು ನನಗೆ ಪರಿಚಯ ಆಗಿರುತ್ತಾರೆ. ದೂರುದಾರರು ನನಗೆ ರೈತರ ಮೂಲಕ 5 ಕ್ವಿಂಟಾಲ ಬೀಜ ಮಾಡಿಸಿ ಕೊಡು ಎಂದು ಕೇಳಿದ್ದರು. ಅದಕ್ಕೆ ನಾನು ಖರ್ಚು ಬರುತ್ತದೆ ಅದಕ್ಕೆ ಅಡ್ವಾನ್ಸ ಕೊಡಬೇಕು ಎಂದು ಕೇಳಿರುತ್ತೇನೆ. ಅದಕ್ಕೆ ದೂರುದಾರರು ಅಡ್ವಾನ್ಸ ಹಣಕೊಡುತ್ತೇನೆ ಭದ್ರತೆಗಾಗಿ ಚೆಕ್ ಬೇಕು ಎಂದು ಕೇಳಿರುತ್ತಾರೆ. ಆ ಪ್ರಕಾರ ನಾನು ದೂರುದಾರರಿಗೆ ಸಹಿ ಮಾಡಿದ ಬ್ಯಾಂಕ್ ಆಫ್ ಇಂಡಿಯಾದ 4 ಖಾಲಿ ಚೆಕ್ ಗಳನ್ನು ಭದ್ರತೆಗಾಗಿ ದೂರುದಾರರಿಗೆ ಕೊಟ್ಟಿರುತ್ತೇನೆ. ಚೆಕ್ ಕೊಟ್ಟ ನಂತರ ದೂರುದಾರರು ನನ್ನ ಖಾತೆಗೆ ರೂ.13,00,000/- ಹಣವನ್ನು

ಹಾಕಿರುತ್ತಾರೆ. ನಂತರ ನಾನು ರೈತರ ಕಡೆಯಿಂದ ಬೀಜ ಬೆಳೆಸಿ ದೂರುದಾರರಿಗೆ ಕೊಟ್ಟಿರುತ್ತೇನೆ. ಕೆಲವು ಬೀಜಗಳು ಫೇಲ್ ಆಗಿರುತ್ತವೆ. ಕೆಲವು ಬೀಜಗಳು ಪಾಸ್ ಆಗಿರುತ್ತವೆ. ಪಾಸ್ ಆದ ಬೀಜಗಳ ಬಾಬ್ತು ಲೆಕ್ಕ ಮಾಡಿರುತ್ತೇವೆ . ಅಡ್ವಾನ್ಸ ಹಣ ಕಳೆದು ನಾನೇ ಅವರಿಗೆ ವಾಪಸ್ಸು ಒಂದು ಲಕ್ಷ ರೂಪಾಯಿ ಕೊಡಬೇಕಾಗಿತ್ತು . ಸದರಿ ಒಂದು ಲಕ್ಷ ಹಣವನ್ನು ಚೆಕ್ ಮೂಲಕ ದೂರುದಾರರಿಗೆ ವಾಪಸ್ಸು ಕೊಟ್ಟಿರುತ್ತೇನೆ. ಆಗ ನಾನು ಭದ್ರತೆಗಾಗಿ ಕೊಟ್ಟಿದ್ದ 4 ಚೆಕ್ ಗಳನ್ನು ವಾಪಸ್ಸು ಕೊಡಿ ಎಂದು ಕೇಳಿರುತ್ತೇನೆ. ಅದಕ್ಕೆ ಅವರು ನಾವು ಹೀಗೆ ನಡೆದು ಕೊಂಡು ಹೋಗೋಣ ಚೆಕ್ ಗಳನ್ನು ನಂತರ ಕೊಡುತ್ತೇನೆ ಎಂದು ಹೇಳಿದ್ದರು. 2019 ರಲ್ಲಿ ಪುನಃ ನಾವು ಬೀಜ ಬೆಳೆದು ದೂರುದಾರರಿಗೆ ಕೊಟ್ಟಿರುತ್ತೇವೆ. ದೂರುದಾರರು ಮೂರು ಕ್ವಿಂಟಾಲ್ ಬೀಜ ಬೆಳೆದು ಕೊಡಿ ಎಂದು ಕೇಳಿದ್ದರು ಆದರೆ ಆ ವರ್ಷ ಮಳೆ ಜಾಸ್ತಿಯಾಗಿದ್ದರಿಂದ ಬೀಜದ ಇಳುವರಿ ಬಂದಿರುವುದಿಲ್ಲ. ಆದ್ದರಿಂದ ಕೇವಲ 47 ಕೆ.ಜಿ ಬೀಜವನ್ನು ಮಾತ್ರ ದೂರುದಾರರಿಗೆ ಕೊಟ್ಟಿದ್ದೇವು. ಆರು ತಿಂಗಳ ನಂತರ 47 ಕೆ.ಜಿ ಬೀಜದ ಬಾಬ್ತು ಹಣ ಕೊಡುವಂತೆ ದೂರದಾರರನ್ನು ಕೇಳಿರುತ್ತೇನೆ. ಆಗ ದೂರುದಾರರು ನಾನು ಮೂರು ಕ್ವಿಂಟಾಲ್ ಬೀಜ ಬೆಳೆದು ಕೊಡು ಎಂದು ಹೇಳಿದರೆ ನೀನು 47 ಕೆ.ಜಿ ಯನ್ನು ಮಾತ್ರ ಕೊಟ್ಟಿರುತ್ತಿಯಾ ಉಳಿದ ಬೀಜವನ್ನು ಬೇರೆಯವರಿಗೆ ಮಾರಿಕೊಂಡಿರುತ್ತಿಯಾ ಎಂದು ನನ್ನ ಜೊತೆ ಜಗಳ ತೆಗೆದಿರುತ್ತಾರೆ. ನಾನು ಕೊಟ್ಟಿದ್ದ ಚೆಕ್ ಗಳನ್ನು ದುರ್ಬಳಕೆ ಮಾಡಿಕೊಂಡು ನನ್ನ ವಿರುದ್ಧ 3 ಚೆಕ್ ಬೌನ್ಸ ಕೇಸುಗಳನ್ನು ಹಾಕಿರುತ್ತಾರೆ.

ದೂರುದಾರರು ಚೆಕ್ ಬೌನ್ಸ ಆದ ನಂತರ ನನಗೆ ನೋಟಿಸ್ ಕೊಟ್ಟಿದ್ದರು. ಸದರಿ ನೋಟಿಸ್ ಗೆ ನಮ್ಮ ವಕೀಲರ ಮೂಲಕ ಪ್ರತ್ಯುತ್ತರವನ್ನು ಕೊಟ್ಟಿರುತ್ತೇನೆ.

***D.W- 1***

ಈಗಾಗಲೇ ದಾಖಲೆಗಳನ್ನು ಹಾಜರು ಪಡಿಸಿದ್ದು ದೂರುದಾರರ ಪಾಟೀ ಸವಾಲಿನ ಸಮಯದಲ್ಲಿ ನಿಡಿ-1 ಎಂದು ಗುರುತಿಸಲಾಗಿರುತ್ತದೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.